ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು-570006.
ಆಡಳಿತ ವಿಭಾಗ

ಸಂಖ್ಯೆ: ಕರಾಮುವಿ/ಆವಿ/ಜಿಎಲ್-04/ಪಿಎಚ್.ಡಿ. ಘಟಕ/2024-25 ದಿನಾಂಕ: 14-11-2024

**ಕಚೇರಿ ಆದೇಶ**

ವಿಷಯ : ಪಿಎಚ್.ಡಿ. ಘಟಕವನ್ನು ಡೀನ್ (ಶೈಕ್ಷಣಿಕ) ವಿಭಾಗದಲ್ಲಿ ಮುಂದುವರೆಸುವ ಬಗೆಗೆ.

ಉಲ್ಲೇಖ : (1) 32ನೇ ವಿಶೇಷ ಶೈಕ್ಷಣಿಕ ಮಂಡಳಿಯ ಅನುಮೋದನೆ ದಿನಾಂಕ: 28-05-2024.
(2) 178ನೇ ಬಿ.ಓ.ಎಂ. ಸಭೆಯ ಅನುಮೋದನೆ ದಿನಾಂಕ: 18-06-2024.
(3) ಡೀನ್ (ಶೈಕ್ಷಣಿಕ) ಇವರ ಪತ್ರ ಸಂಖ್ಯೆ: ಕರಾಮುವಿ/ಡೀನ್ (ಶೈ)/ಡಿಎಸಿ-7/ಕಂ.ನಂ.58518/2024-25, ದಿನಾಂಕ: 22-07-2024.
(4) ಅಧಿಸೂಚನೆ ಸಂಖ್ಯೆ: ಕರಾಮುವಿ/ಆವಿ/ಜಿಎಲ್-4/ಪಿಎಚ್.ಡಿ. ಘಟಕ/2024-25, ದಿನಾಂಕ: 06-08-2024.
(5) ಡೀನ್ (ಶೈಕ್ಷಣಿಕ) ಇವರ ಟಿಪ್ಪಣಿ ಸಂಖ್ಯೆ: ಕರಾಮುವಿ/ಡೀನ್ (ಶೈ)/05/C.No-32872/2019/20, ದಿನಾಂಕ: 27-09-2024.
(6) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 24-10-2024.

* * * * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಿಂದ (3)ರವರೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಪಿಹೆಚ್.ಡಿ. ಸಂಶೋಧನಾರ್ಥಿಗಳ ಅನುಕೂಲಕ್ಕಾಗಿ ಮತ್ತು ಕಾರ್ಯಚಟುವಟಿಕೆಗಳಿಗೆ ಅನುವಾಗುವಂತೆ ಶೈಕ್ಷಣಿಕ ಮಂಡಳಿ ಅನುಮೋದನೆ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನದಂತೆ ಪಿಹೆಚ್.ಡಿ. ಘಟಕ (Ph.D Cell) ಸ್ಥಾಪಿಸಿ ಉಲ್ಲೇಖ (4)ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಉಲ್ಲೇಖ (5)ರ ಟಿಪ್ಪಣಿಯಲ್ಲಿ 33ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ತೀರ್ಮಾನಿಸಿರುವಂತೆ ಪಿಹೆಚ್.ಡಿ. ಘಟಕವನ್ನು ಪ್ರತ್ಯೇಕ ಮಾಡುವುದು ಸೂಕ್ತವಲ್ಲ, ಬದಲಿಗೆ ಪ್ರಸ್ತುತ ಡೀನ್(ಶೈಕ್ಷಣಿಕ) ರವರ ವಿಭಾಗದಲ್ಲಿದ್ದು ಅಲ್ಲಿಯೇ ಮುಂದುವರೆಸುವುದು ಸೂಕ್ತವೆಂದು ಹಾಗೂ 179ನೇ BOM ಸಾಮಾನ್ಯ ಸಭೆಯಲ್ಲೂ ಕೂಡ ಶೈಕ್ಷಣಿಕ ಮಂಡಳಿ ಸಭೆಯ ತೀರ್ಮಾನವನ್ನು ಅನುಮೋದಿಸಿರುವ ಹಿನ್ನೆಲೆಯಲ್ಲಿ ಡೀನ್ (ಶೈಕ್ಷಣಿಕ) ವಿಭಾಗದಲ್ಲಿಯೆ ಪಿಹೆಚ್.ಡಿ. ಕಾರ್ಯಚಟುವಟಿಕೆಗಳು ಮುಂದುವರೆಸಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಮೇರೆಗೆ ಉಲ್ಲೇಖ (5)ರಲ್ಲಿ ಪಿಹೆಚ್.ಡಿ. ಘಟಕ (Ph.D Cell) ಸ್ಥಾಪಿಸಿ ಹೊರಡಿಸಲಾಗಿದ್ದ ಅಧಿಸೂಚನೆಯನ್ನು ರದ್ದುಪಡಿಸಲಾಗಿದೆ.

ಮುಂದುವರೆದು, ಪಿಹೆಚ್.ಡಿ. ಕಡತಗಳ ಕಾರ್ಯಚಟುವಟಿಕೆಗಳನ್ನು ವಿಶೇಷಾಧಿಕಾರಿಗಳು (ಪಿಹೆಚ್.ಡಿ. ಘಟಕ) ಇವರ ಮುಖಾಂತರ ಮಂಡಿಸಲು ತಿಳಿಸಲಾಗಿದೆ.

ಆದೇಶದ ಮೇರೆಗೆ
14/11/2024
ಕುಲಸಚಿವ.

ಗೆ,

ಡೀನ್ (ಶೈಕ್ಷಣಿಕ), ಕರಾಮುವಿ, ಮೈಸೂರು.

ಪ್ರತಿ:

1) ವಿಶೇಷಾಧಿಕಾರಿಗಳು (ಪಿಹೆಚ್.ಡಿ. ಘಟಕ), ಡೀನ್ (ಶೈಕ್ಷಣಿಕ), ಕರಾಮುವಿ, ಮೈಸೂರು.
2) ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2) ಎಲ್ಲಾ ವಿಭಾಗದ ಮುಖ್ಯಸ್ಥರಿಗೆ, ಕರಾಮುವಿ, ಮೈಸೂರು.
3) ಡೀನ್ (ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು.
4) ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಯವರ ಕಾರ್ಯಾಲಯ, ಕರಾಮುವಿ, ಮೈಸೂರು.
5) ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
6) ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
7) ಡಾ. ನವೀನ್ ಕುಮಾರ್ ಸಿ.ಜಿ., ನೋಡಲ್ ಆಫೀಸರ್, ವೆಬ್‌ಸೈಟ್, ಕರಾಮುವಿ, ಮೈಸೂರು, ಈ ಕಚೇರಿ ಆದೇಶವನ್ನು ವಿ.ವಿ. ನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
8) ಸೂಚನಾ ಫಲಕಕ್ಕೆ.
9) ಕಚೇರಿ ಪ್ರತಿ.

O:Pradeep/A4 Letter File/29